

ಸರ್ವ್ ಮಾಡಿದಾಗ ಗೆಲುವಿನ ಪಾಯಿಂಟ್‌ಗಳಾಗಿ ಪರಿವರ್ತಿಸಿದ್ದರಲ್ಲಿ 74 ಶೇಕಡಾ ಯಶಸ್ಸು, 64 ಸಲ ರಿಸೀವಿಂಗ್ ಪಾಯಿಂಟ್ಸ್ ಗೆಲುವು – ಇವು ಪಂದ್ಯದಲ್ಲಿ ಸಿನ್ನರ್ ಆಟದ ವೈಖರಿಗೆ ಕನ್ನಡಿ ಹಿಡಿಯುವ ಅಂಕಿಅಂಶ.

ಇನ್ನು, ಅಲ್ಕರಾಜ್ ಅಂಕಿಅಂಶದ ಕಡೆ ನೋಡೋಣ: ಎಂಟು ಏಸ್‌ಗಳು, ಏಳು ಡಬಲ್ ಫಾಲ್ಟ್‌ಗಳು, ಮೊದಲ ಸರ್ವ್ ಮಾಡಿದಾಗ ಗೆಲುವಿನ ಪಾಯಿಂಟ್‌ಗಳಾಗಿ ಪರಿವರ್ತಿಸಿದ್ದರಲ್ಲಿ 66 ಶೇಕಡಾ ಯಶಸ್ಸು, 52 ಸಲ ರಿಸೀವಿಂಗ್ ಪಾಯಿಂಟ್ಸ್ ಗೆಲುವು.

ಇಷ್ಟೇ ಸ್ಕೋರ್ ನೋಡಿದರೆ, ಒಟ್ಟು 145 ಪಾಯಿಂಟ್‌ಗಳನ್ನು ಗೆದ್ದ ಅಲ್ಕರಾಜ್ ಅವರಿಗಿಂತ 147 ಪಾಯಿಂಟ್‌ಗಳನ್ನು ತಮ್ಮದಾಗಿಸಿಕೊಂಡ ಸಿನ್ನರ್ ಮುಂದೆ ಇದ್ದರಲ್ಲವೇ ಎನಿಸಬಹುದು. ಆದರೆ, 23 ಗೇಮ್‌ಗಳನ್ನು ಸ್ಪೇನ್ ಆಟಗಾರ ತನ್ನದಾಗಿಸಿಕೊಂಡರೆ, ಸಿನ್ನರ್ 22 ಗೇಮ್‌ಗಳಲ್ಲಿ ಗೆಲುವಿನ ನಗೆ ಬೀರಿದ್ದರು. ಹಲ್ಲು ಕಚ್ಚಿ ಆಡುವಂತೆ ಮಾಡಿದ ಪಂದ್ಯದಲ್ಲಿ ಒಂದೇ ಒಂದು ಗೇಮ್‌ನ ಹೆಚ್ಚುವರಿ ವಿಜಯ ಕಪ್ ಗೆಲ್ಲುವಲ್ಲಿ ಅಂತಿಮ ಹೆಜ್ಜೆ ಇಡಲು ಪ್ರೇರಣೆ ಕೊಟ್ಟಿತೆನ್ನುವುದೇ ಆಟದ ಆತ್ಮವನ್ನು ತೆರೆದಿಡುತ್ತದೆ.

ಸೆಮಿಫೈನಲ್ ಪಂದ್ಯದ ಮೊದಲ ಸೆಟ್‌ನಲ್ಲಿ 4–0ಯಲ್ಲಿ ಸಿನ್ನರ್ ಮುನ್ನಡೆ ಸಾಧಿಸಿದಾಗ, ಅಲ್ಕರಾಜ್ ಅಭಿಮಾನಿಗಳ ಕಣ್ಣಲ್ಲಿ ಆತಂಕ. ಎರಡನೇ ಸೆಟ್‌ನಲ್ಲಿ ಸ್ಪೇನ್ ಹುಡುಗ ಗೆದ್ದ ನಂತರ ಸಿನ್ನರ್ ಕೈ ಸ್ನಾಯುಗಳಲ್ಲಿ ತುಸು ಸಮಸ್ಯೆ ಕಾಣಿಸಿಕೊಂಡಿತು. ಅದು ಈ ಹುಡುಗನ ವಿಜಯಕ್ಕೆ ದಾರಿ ಮಾಡಿಕೊಡಬಹುದು ಎಂಬ ಲೆಕ್ಕಾಚಾರ ಮುಂದಿನ ಸೆಟ್‌ನಲ್ಲೇ ಸುಳ್ಳಾಯಿತು. ಮೂರನೇ ಸೆಟ್‌ನಲ್ಲಿ ಸಿನ್ನರ್ ವಿಜಯಿಯಾದರು. ನಾಲ್ಕನೇ ಸೆಟ್ ಶುರುವಾದಾಗ, ಅಲ್ಕರಾಜ್ ಟ್ರೇಡ್‌ಮಾರ್ಕ್‌ನ ಮುಂಗೈ ಹೊಡೆತಗಳು ಎಂದಿನಂತೆ ಚಿತ್ತಾಪಹಾರಿಯಾದವು. ಕೊನೆಯ ಸೆಟ್‌ನ ಪೋಟಿಯಂತೂ ವೀಕ್ಷಕರ ಕಣ್ಣಿಗೆ ಹಬ್ಬ.

‘ಯಾತನೆಯ ಸುಖ ಏನೆಂದು ಅನುಭವಿಸಿದವರೇ ಬಲ್ಲರು. ಆವೆಮಣ್ಣಿನ ಕಣದಲ್ಲಿ ಸುದೀರ್ಘ ರ‍್ಯಾಲಿಗಳು, ಐದು ಸೆಟ್‌ಗಳ ಪಂದ್ಯದ ನಾಲ್ಕು ತಾಸಿನ ಸವಾಲು. ಅಬ್ಬಾ, ನನ್ನ ಪುಟ್ಟ ಅವಧಿಯ ವೃತ್ತಿಪರ ಟೆನಿಸ್‌ನ ಅತ್ಯಂತ ಕಠಿಣ ಪಂದ್ಯಗಳನ್ನು ಆಡಿರುವುದು ಯನಿಕ್ ಸಿನ್ನರ್ ಎದುರೇ. ಅವನೊಬ್ಬ ಶ್ರೇಷ್ಠ ಆಟಗಾರ’– ಪಂದ್ಯವನ್ನು 2–6, 6–3, 3–6, 6–4, 6–3ರಲ್ಲಿ ತಮ್ಮದಾಗಿಸಿಕೊಂಡ ನಂತರ ಅಲ್ಕರಾಜ್ ಹೇಳಿದ ಮಾತಿದು.

ಫೈನಲ್‌ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜವೆರೆವ್ ಎದುರಾಳಿ. ಅಲ್ಲಿಯೂ ಮತ್ತದೇ ಹೋರಾಟ. 6–3, 2–6, 5–7, 6–1, 6–2ರಲ್ಲಿ ಗೆಲ್ಲಲು ಬೆವರು ಬಸಿಯಬೇಕಾಯಿತು. ಗೆಲುವಿನ ಪಾಯಿಂಟ್ ಗಳಿಸಿದ ಮೇಲೆ ಕಣದಲ್ಲಿ ಅಂಗಾತವಾದ ಅವರು ಕಣ್ಣುಮುಚ್ಚಿ ಮುಷ್ಟಿ ಬಿಗಿ ಮಾಡಿದ ಕ್ಷಣ ರೋಚಕ. 21 ವರ್ಷದ ಈ ಹುಡುಗ ಮೂರು ಬಗೆಯ ಕಣಗಳಲ್ಲಿ ಗ್ರ್ಯಾನ್‌ಸ್ಲ್ಯಾಮ್ ಪ್ರಶಸ್ತಿ ಗೆದ್ದ ಅತಿ ಕಿರಿಯ ಎಂಬ ಹಿರಿಮೆಯನ್ನು ತನ್ನದಾಗಿಸಿಕೊಂಡ ಕ್ಷಣವದು.

ನಾಲ್ಕನೇ ಸೆಟ್ ಆಡುವಾಗ ಮೆಡಿಕಲ್ ಟೈಮ್‌ಔಟ್ ತೆಗೆದುಕೊಂಡು, ಎಡ ತೊಡೆಯ ಸ್ನಾಯುವಿನಲ್ಲಿ ಕಾಣಿಸಿಕೊಂಡಿದ್ದ ನೋವನ್ನು ಅಲ್ಕರಾಜ್ ನೀಗಿಕೊಂಡು ಬಂದಾಗ ತುಸು ಆತಂಕವಿತ್ತು. ಜವೆರೆವ್ ಅವರ ವೇಗದ ಸರ್ವ್‌ಗಳು 21ರ ಹುಡುಗನನ್ನು ಕಂಗೆಡಿಸಿದ್ದೂ ಸುಳ್ಳಲ್ಲ. ಚೆಂಡಿನ ಪುಟಿತದಲ್ಲಿನ ಏರಿಳಿತ ಧೃತಿಗೆಡಿಸುತ್ತಿದೆ ಎಂದು ಪಂದ್ಯದ ನಡುವೆಯೇ ತಮ್ಮ ತಂಡದವರಲ್ಲಿ ಅಲ್ಕರಾಜ್ ಹೇಳಿಕೊಂಡಿದ್ದರು. ಆ ಸವಾಲಿಗೆ ಬಲು ಬೇಗ ಜವಾಬನ್ನೂ ಕೊಟ್ಟಿದ್ದು ಅವರ ಸಮಯಪ್ರಜ್ಞೆಗೆ ಹಿಡಿದ ಕನ್ನಡಿ.

ಆರೋಗ್ಯಭಾಗ್ಯ ಎಂದಿನಂತೆ ಇಲ್ಲದೇ ಇದ್ದರೂ ಒಂದು ಕೈ ನೋಡೋಣ ಎಂದು ಈ ಸಲ ಫ್ರೆಂಚ್ ಓಪನ್‌ಗೆ ಕಾಲಿಟ್ಟ ರಫೆಲ್ ನಡಾಲ್ ಅವರನ್ನು ಮೊದಲ ಸುತ್ತಿನಲ್ಲೇ ಮಣಿಸಿದ್ದವರು ಇದೇ ಜವೆರೆವ್. ಅವರಿಗೆ ಸ್ಪೇನ್ ಆಟಗಾರನೇ ಮಾಂಜಾ ಕೊಟ್ಟಿದ್ದು ಕ್ರೀಡಾಸುಖದ ಕ್ಷಣಗಳಲ್ಲಿ ಒಂದು.

ಓಪನ್ ಟೆನಿಸ್ ಶಕೆ ಶುರುವಾದಾಗಿನಿಂದ, ರೋಲ್ಯಾಂಡ್ ಗ್ಯಾರೊಸ್‌ನಲ್ಲಿ ನಡೆದ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳಲ್ಲಿ ಐದು ಸೆಟ್‌ಗಳ ಆಟದಲ್ಲಿ ವಿಜಯ ಸಾಧಿಸಿದ ಮೊದಲಿಗ ಅಲ್ಕರಾಜ್. 1962ರಲ್ಲಿ ಆಸ್ಟ್ರೇಲಿಯಾದ ರಾಡ್‌ಲೇವರ್ ಅಂತಹುದೊಂದು ಸಾಧನೆ ಮಾಡಿದ್ದರು. ಆಗ ಓಪನ್ ಟೆನಿಸ್ ಶಕೆ ಇನ್ನೂ ಪ್ರಾರಂಭವಾಗಿರಲಿಲ್ಲ.

ಹಾರ್ಡ್, ಗ್ರಾಸ್, ಕ್ಲೇ (ಹುಲ್ಲು, ಗಟ್ಟಿನೆಲ, ಆವೆಮಣ್ಣಿನ ಕಣ) ಮೂರೂ ಮೇಲ್ಮೈನಲ್ಲಿ ಗ್ರ್ಯಾನ್‌ಸ್ಲ್ಯಾಮ್ ಪ್ರಶಸ್ತಿಗಳನ್ನು ಗೆದ್ದಿರುವ ಅತಿ ಕಿರಿಯ ವಯಸ್ಸಿನ ಆಟಗಾರ ಅಲ್ಕರಾಜ್. ಇನ್ನು, ಮೂರು ಸಲ ಫೈನಲ್ ಪ್ರವೇಶಿಸಿದಾಗ ಸತತವಾಗಿ ಅಷ್ಟನ್ನೂ ಗೆದ್ದ ಏಳನೆಯವ ಎನ್ನುವ ಶ್ರೇಯವೂ ಅವರದ್ದಾಗಿದೆ. ಆಸ್ಟ್ರೇಲಿಯಾ ಓಪನ್ ಗ್ರ್ಯಾನ್‌ಸ್ಲ್ಯಾಮ್ ಪ್ರಶಸ್ತಿಯೊಂದನ್ನು ತಮ್ಮದಾಗಿಸಿಕೊಂಡುಬಿಟ್ಟರೆ, ನಡಾಲ್ ದಾಖಲೆಯನ್ನು ಅವರು ಸರಿಗಟ್ಟುವರು.

ಅಂದಹಾಗೆ, 2000ನೇ ಇಸವಿಯ ನಂತರ ಹುಟ್ಟಿದ ಯಾರೊಬ್ಬರೂ ಇದುವರೆಗೆ ಫ್ರೆಂಚ್ ಓಪನ್ ಚಾಂಪಿಯನ್ ಆಗಿರಲಿಲ್ಲ.

ಅಲ್ಕರಾಜ್ ಸ್ಪ್ಯಾನಿಶ್ ಭಾಷೆಯಲ್ಲೇ ಮಾತನಾಡುವುದು. ‘ನನಗೆ ಎಷ್ಟು ಸಾಧ್ಯವೋ ಅಷ್ಟೂ ಗ್ರ್ಯಾನ್‌ಸ್ಲ್ಯಾಮ್ ಗೆಲ್ಲುವುದೊಂದೇ ಗುರಿ. ಇದಲ್ಲದೆ ಒಲಿಂಪಿಕ್ಸ್ ಪದಕ ಗೆಲ್ಲುವ ಕನಸೂ ಇದೆ. ಅದಕ್ಕಾಗಿಯೇ ದಣಿವರಿಯದೆ ಅಭ್ಯಾಸ ಮಾಡುವೆ. ನೋವು, ಗಾಯ ಆದಾಗ ಸಂಕಟವಾಗುತ್ತದೆ. ಅದನ್ನು ಮೀರಿ, ಮತ್ತೆ ಚೆನ್ನಾಗಿ ಆಡಿದಾಗ ಮರುಜನ್ಮ ಪಡೆದಂತಾಗುತ್ತದೆ. ಕನಸೂ ಮುಂದುವರಿಯುತ್ತದೆ’ ಎಂಬ ಅವರ ನುಡಿಮುತ್ತಿಗೆ ಕ್ರೀಡಾಪ್ರಿಯರು ಜೈ ಎನ್ನದಿರಲು ಸಾಧ್ಯವೆ?

ಪ್ರತಿಕ್ರಿಯಿಸಿ: **feedback@sudha.co.in**

